<u>ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿಸಿ ನಂಬ್ರಃ **228/2024**
ಸಿಡಬ್ಲ್ಯೂ- 03
ಪಿಡಬ್ಲ್ಯೂ- 03

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಗುಲಾಬಿ ಪೂಜಾರ್ತಿ |
| ಗಂಡನ ಹೆಸರು | ಃ | ಗಿರೀಶ್ ಪೂಜಾರಿ |
| ಪ್ರಾಯ | ಃ | 53 ವರ್ಷ |
| ಉದ್ಯೋಗ | ಃ | ಕೂಲಿ, |
| ವಾಸ | ಃ | ಹೆಂಗವಳ್ಳಿ |

ದಿನಾಂಕಃ **15-10-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ನನಗೆ ಆರೋಪಿತ, ಚಾ ಸಾ.1 ರಿಂದ 4 ರವರ ಪರಿಚಯ ಇರುತ್ತದೆ. ನನಗೆ ಪ್ರಕರಣದ ಬಗ್ಗೆ ಏನೂ ಗೊತ್ತಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

2. ದಿನಾಂಕ 29-05-2016 ರಂದು ನಾನು ಮನೆಯಲ್ಲಿರುವಾಗ ರಾತ್ರಿ ಸುಮಾರು 9.00 ಗಂಟೆಗೆ ನಮ್ಮ ಮನೆಯ ಸಮೀಪ ಇರುವ ರಸ್ತೆಯಲ್ಲಿ ಗಾಡಿ ಶಬ್ದ ಕೇಳಿ ಹೊರಗೆ ಹೋಗಿ ನೋಡಲಾಗಿ ನಮ್ಮ ಸಂಬಂದಿ ಆರೋಪಿತ ರವಿ ಪೂಜಾರಿ ಮೋಟಾರು ಸೈಕಲನ್ನು ಆತನ ಭಾವ ಚಾ ಸಾ.1 ಜಯಕರ ಪೂಜಾರಿ ಹೋಗುತ್ತಿರುವ ಮೋಟಾರು ಸೈಕಲಿಗೆ ಅಡ್ಡ ಇಟ್ಟು ಬೈಯುತ್ತಿದ್ದನು. ಬೈಕಿನ ಹೆಡ್ ಲೈಟ್ ಪ್ರಕಾಶ ಬಿದ್ದುದರಿಂದ ಅವರನ್ನು ಗುರುತಿಸಲಾಯಿತು. ನಮ್ಮ ಮನೆಯ ಬೇಲಿ ಬಳಿ ನಿಂತು ನೋಡುತ್ತಿದ್ದಂತೆ ಆರೋಪಿತ ಚಾ ಸಾ.1 ರವರನ್ನು ಉದ್ದೇಶಿಸಿ ಕಣ್ಣು ಕಾಣಿಸುವುದಿಲ್ಲವಾ, ನನ್ನ ಮೈಮೇಲೆ ಬರುತ್ತೀಯಾ, ಬೋಳಿ ಮಗನೆ, ಬೇವರ್ಸಿ, ನಾಯಿ

ಸಿಸಿ ನಂಬ್ರ: **228/2024**
ಸಿಡಬ್ಲ್ಯೂ- 03
ಪಿಡಬ್ಲ್ಯೂ- 03

ಮಗನೇ ನೀನು ಏನು ಮಾಡುತ್ತಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಬೇಲಿ ಬಳಿ ಇದ್ದ ಗೂಟವನ್ನು ತೆಗೆದು ಜಯಕರನ ತಲೆಗೆ ಹೊಡೆದು, ಆತ ಬೊಬ್ಬೆ ಹಾಕಿದಾಗ ನಾನು ಅಲ್ಲಿಗೆ ಹೋದಾಗ ಚಾ ಸಾ. 2 ಹತ್ತಿರದಲ್ಲೇ ಇದ್ದು ಅವರು ಸಹ ಬಂದಿದ್ದು, ಆರೋಪಿತ ನಮ್ಮನ್ನು ನೋಡಿ ಮೋಟಾರು ಸೈಕಲಿನಲ್ಲಿ ಆತನ ಹೆಂಡತಿಯನ್ನು ಕೂರಿಸಿಕೊಂಡು ಮನೆ ಕಡೆ ಹೋದನು. ಹಲ್ಲೆಗೆ ಒಳಗಾದ ಚಾ ಸಾ.1 ರವರನ್ನು ಚಾ ಸಾ.2 ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಈ ಬಗ್ಗೆ ಚಾ ಸಾ.1 ನಿಪಿ.1 ರಂತೆ ದೂರು ಸಲ್ಲಿಸಿದ್ದು, ನಾನು ನಿಪಿ.3 ರಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನಿಜವಿದ್ದರೂ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಆರೋಪಿತರ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

<u>ಮರು ವಿಚಾರಣೆ: ಇಲ್ಲ</u>

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ